4. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಗ್ರಾಮ ಪಂಚಾಯ್ತಿಗಳನ್ನು ತೊಡಗಿಸಲು ಸಂಯೋಜನೆ ಮಾಡಬೇಕು.

5. ಪ್ರಾಥಮಿಕ ಶಾಲೆಗಳಿಗೆ ಮಾರ್ಗದರ್ಶನ, ಮೇಲುಸ್ತುವಾರಿ, ಭೇಟಿ ಹಾಗೂ ಮಾರ್ಗದರ್ಶನ.

6. ಇಲಾಖಾ ಯೋಜನೆಗಳ ಕಾರ್ಯಕ್ರಮದ ಮೇಲುಸ್ತುವಾರಿ.

7. ಸಮವಸ್ತ್ರ, ಪಠ್ಯಪುಸ್ತಕ, ಶಾಲಾ ಬ್ಯಾಗ್, ಮಧ್ಯಾಹ್ನ ಉಪಹಾರ ಯೋಜನೆ ಹಾಗೂ ವಿದ್ಯಾರ್ಥಿ ವೇತನಗಳ ಸೌಲಭ್ಯ ಮಕ್ಕಳಿಗೆ ತಲುಪಿಸುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

ಜೊತೆಗೆ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ ಮತ್ತು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಕಾಲಕಾಲಕ್ಕೆ ಶಾಲೆಗಳಿಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಿರುವುದು.

ಆ) ಶಿಕ್ಷಣ ಸಂಯೋಜಕರು ಶಾಲೆಗಳಿಗೆ ಭೇಟಿ ನೀಡಿ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಆಡಳಿತಾತ್ಮಕವಾಗಿ ತೊಡಗಿಸಿ ಕೊಂಡಿರುವುದರಿಂದ ವಿಷಯ ಬೋಧನೆ ಹಾಗೂ ಲೆಕ್ಕ ಪತ್ರಗಳ ಪಾಲನೆ ಸರಿಯಾಗಿ ಆಗುತ್ತಿದೆ.

ಇ) ಇಲ್ಲ.

ಉಡುಪಿ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ 2003-04ನೇ ಸಾಲಿನಿಂದ 8ನೇ ತರಗತಿಯ ಪ್ರಾರಂಭದ ಬಗ್ಗೆ

2917 (3262) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಎಷ್ಟು ಪ್ರಾಥಮಿಕ ಶಾಲೆಗಳಲ್ಲಿ 2003-04ನೇ ಸಾಲಿನಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ. (ತಾಲ್ಲೂಕುವಾರು ಶಾಲೆಗಳ ವಿವರ ನೀಡುವುದು);

ಆ) 8ನೇ ತರಗತಿಗಳಿಗೆ ಭೋದಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಂದ ಸಾಧ್ಯವೆಂದು ಸರ್ಕಾರ ಭಾವಿಸಿದೆಯೇ;

ಇ) ಭಾವಿಸಿದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಯಾವ ವಿಷಯದಲ್ಲಿ 8ನೇ ತರಗತಿಗೆ ಭೋಧನೆ ಮಾಡಲಾಗುವುದು;

ಈ) ಶಾಲೆ ಪ್ರಾರಂಭಿಸುವಲ್ಲಿ ಭೋಧಿಸಲು ಲಭ್ಯವಿರುವ ಶಿಕ್ಷಕರ ಬಗ್ಗೆ ತಿಳಿದುಕೊಳ್ಳದೇ 8ನೇ ತರಗತಿ ಪ್ರಾರಂಭಿಸಿರುವುದರಿಂದ ಮಕ್ಕಳಿಗೆ ತೊಂದರೆಯಾಗುವುದಿಲ್ಲವೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಉ) ಪ್ರೌಢ ಶಾಲೆಗಳಲ್ಲಿ ಶಿಕ್ಷಕರಿಗೆ ಸಾಕಷ್ಟು ಪೀರಿಯಡ್‌ಗಳು ಇದ್ದಾಗ್ಯೂ ಪ್ರಾಥಮಿಕ ಶಾಲೆಗಳಿಗೆ ಭೋದಿಸಲು ಶಿಕ್ಷಕರನ್ನು ನಿಯೋಜಿಸಲಾಗುವುದೇ; ನಿಯೋಜಿಸಲಾದ ಶಿಕ್ಷಕರಿಗೆ ಹೆಚ್ಚುವರಿ ಭತ್ಯೆ ಸರ್ಕಾರ ಮಂಜೂರು ಮಾಡುವುದೇ?

ಪ್ರೊ. ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಉಡುಪಿ ಜಿಲ್ಲೆಯ 50 ಆಯ್ದ ಕೇಂದ್ರ ಶಾಲೆಗಳಲ್ಲಿ 8ನೇ ತರಗತಿ ಪ್ರಾರಂಭಿಸಲಾಗಿದೆ.

ಉಡುಪಿ ಉತ್ತರ	–	3
ಬೈಂದೂರು	–	3
ಕಾರ್ಕಳ ಉತ್ತರ	–	07
ಕುಂದಾಪುರ	–	17

ಆ) 8ನೇ ತರಗತಿಗೆ ಭೋದಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಾಧ್ಯವೆಂದು ಸರ್ಕಾರ ಭಾವಿಸಿಲ್ಲ.

ಪ್ರತ್ಯೇಕವಾಗಿ ಈ ಶಾಲೆಗಳಿಗೆ ವಿಜ್ಞಾನ ಹಾಗೂ ಇಂಗ್ಲೀಷ್ ಬೋಧನೆಗಾಗಿ ಹತ್ತಿರದ ಪ್ರೌಢ ಶಾಲೆಗಳಿಂದ ಪದವೀಧರ ತರಬೇತಿ ಹೊಂದಿದ ವಿಜ್ಞಾನ ಶಿಕ್ಷಕರುಗಳನ್ನು ನಿಯೋಜಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ್ಯಂತ 2632 ಕೇಂದ್ರ ಶಾಲೆಗಳನ್ನು ಗುರ್ತಿಸಲಾಗಿದ್ದು ಶಾಲೆಗೆ ಒಂದಂತೆ ವಿಜ್ಞಾನ ಶಿಕ್ಷಕರ ಹುದ್ದೆಗಳನ್ನು ಸೃಜಿಸಿ ಪಿಸಿಎಂ ಪದವೀದರ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) 1) ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಪದವೀಧರ ವಿದ್ಯಾರ್ಹತೆ ಹೊಂದಿದ ಶಿಕ್ಷಕರು 8ನೇ ತರಗತಿಗೆ ಇಂಗ್ಲೇಷ್ ಭೋದಿಸುವ ಸಾಮಥ್ಯ ಹೊಂದಿರುತ್ತಾರೆ.

2) ಹೊಸದಾಗಿ ನೇಮಕವಾದ ಪಿಸಿಎಂ ವಿಜ್ಞಾನ ಶಿಕ್ಷಕರು ಗಣಿತ ಮತ್ತು ವಿಜ್ಞಾನ ಭೋದಿಸಲು ಅರ್ಹರಿರುತ್ತಾರೆ.

ಈ) 8ನೇ ತರಗತಿಗೆ ಭೋದಿಸಲು ಸರ್ವ ಶಿಕ್ಷ ಅಭಿಯಾನ ದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಅರ್ಹತೆಯುಳ್ಳ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಇಂಗ್ಲೀಷ್ ಮತ್ತು ವಿಜ್ಞಾನ ಭೋದಿಸಲು ಅರ್ಹತೆಯುಳ್ಳ ಶಿಕ್ಷಕರನ್ನು ನೇಮಿಸಲು ಉಪ ನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದೆ.

ಉ) ಪ್ರೌಢ ಶಾಲಾ ಶಿಕ್ಷಕರಿಗೆ ಸಾಕಷ್ಟು ಪೀರಿಯಡ್‌ಗಳು ಇದ್ದರೆ ಪ್ರಾಥಮಿಕ ಶಾಲೆಗಳಿಗೆ ನಿಯೋಜಿಸಲಾಗುವುದಿಲ್ಲ.

ಕಡಿಮೆ ಪೀರಿಯಡ್‌ಗಳು ಇರುವಂತಹವರನ್ನು ಮಾತ್ರ ನಿಯೋಜಿಸಲಾಗುವುದು ಮತ್ತು ಅಂತಹ ಶಿಕ್ಷಕರಿಗೆ ಹೆಚ್ಚುವರಿ ಭತ್ಯೆ ನೀಡುವ ಪ್ರಸ್ತಾವನೆ ಇರುವುದಿಲ್ಲ.

ಸಿಂಧನೂರು ತಾಲ್ಲೂಕು ಪಂಚಾಯಿತಿಯ ಅವ್ಯವಹಾರ ಕುರಿತು

2918 (3278) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕು ಪಂಚಾಯತಿಯಲ್ಲಿ 1 ರಿಂದ 2 ಕೋಟಿ ರೂಪಾಯಿಗಳ ವಿವಿಧ ಯೋಜನೆಗಳಲ್ಲಿ ಅವ್ಯವಹಾರ ನಡೆದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ತಾಲ್ಲೂಕು ಪಂಚಾಯತಿ ಹಿಂದಿನ ಅಧ್ಯಕ್ಷರು ಹಾಗೂ ಹಾಲಿ ಅಧ್ಯಕ್ಷರ ಆಡಳಿತ ಮಂಡಳಿ ಮೇಲೆ ತೆಗೆದುಕೊಂಡಿರುವ ಕ್ರಮವೇನು;

ಆ) ಇಂದಿರಾ ಆವಾಜ್ ಯೋಜನೆಯಲ್ಲಿ (ಕಚ್ಚಾದಿಂದ ಪಕ್ಕಾ) ಮನೆಗಳನ್ನಾಗಿ ಮಾಡಲು ಸರ್ಕಾರ ಹಾಕಿದ ನಿಯಮಗಳೇನು; ನಿಯಮಗಳನ್ನು ಗಾಳಿಗೆ ತೂರಿ ಅವ್ಯವಹಾರ ನಡೆಸಿರುವ ತಾಲ್ಲೂಕು ಪಂಚಾಯತಿ ಆಡಳಿತ ಮಂಡಳಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)

ಅ) ಹೌದು.

ಈ ಬಗ್ಗೆ ವಿವರವಾದ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಯಚೂರು ರವರಿಂದ ಕೋರಲಾಗಿದೆ.